

ಕವಿತೆ



ಕಾವ್ಯಾ ಕಡಮೆ

ಕಲೆ: ಸಂತೋಷ್ ಸಸಿಹಿತ್ಲು

# ಇಬ್ಬರು ಸೂಳೆಯರು

ಸುಮಾ ಮತ್ತು ರೀಮಾ
ಹೊಸ ವಸ್ತ್ರಕ್ಕೆ ಚುಚ್ಚಿದ ಸೂಜಿ
ಮೊನೆಯ ಹಾಗೆ ಅವರ ಹೆಸರು

ವಯವಿನ್ನೂ ಸಣ್ಣದು ಚಿಮ್ಮು ಕಾಂತಿ
ಒಳ ಹರಿವ ನೆತ್ತರು ಮಾತ್ರ ಪುರಾತನ

ಅಂಕೆಯೇ ಇಲ್ಲ ಸುಮಾ ಮತ್ತು ರೀಮಾ
ಮಾತುಗಳಿಗೆ
ರಾತ್ರಿಯೆಲ್ಲ ದಣಿದು ಸುಖವ ಸೋಸಿದು
ಗೋಡೆಯ ನಿಶ್ಚಲ ಹಲ್ಲಿಯ ಹಾಗೆ
ನಿರ್ಲಿಪ್ತ ನಿದಿರೆಗೆ ಜಾರಿರುವಾಗ
ಈ ಕೋಣೆಯ ಹುಡುಗಿಯರು
ಇವರಿಬ್ಬರು ಮಾತ್ರ ಹರಟುತ್ತ ಕೂಡುವರು

'ಸಾಕು ಮಲಗಿರಮ್ಮ ಡ್ಯೂಟಿಗೆ ಟೈಮಾಗತೈತೆ ಮತ್ತೆ'
'ವಟವಟ ಹಚ್ಚಿಕೊಂಡು ಕುಂತ್ರ ಮುಗಿಯಂಗಿಲ್ಲ
ಪ್ಯಾಲಿಗಳದು'
ಸೀದು ಹೋಗ್ತಿತ್ತು ಹೆಂಚಾಗಿದ್ರ
ಒಡೆದು ಹೋಗ್ತಿತ್ತು ಕಾಷ್ಠವಾಗಿದ್ರ
ಸಿಡಿದು ಹೋಗಲಿ ಸಾಸಿವಿ ಇವರು
ಬಾಯಿ ಮುಚ್ಚೋ ಮೊದಲ
ಬೆಳತನಕ ನಿದ್ದಿಲ್ಲ ಇವರ ಇವರ...

ತಪ್ಪಿಯೂ ಆದೊಂದು ಶಬ್ದ
ಬೈಗುಳವಾಗಿ ಕೇಳಿ ಬರದು
ಇಲ್ಲಿ ಈ ಕೋಣೆಯೆಂಬ ವಿಳಾಸದಲ್ಲಿ

ಎಲ್ಲ ಹಾರಿಕೆ ಮಾತುಗಳ ನಡುವೆ
ಸುಮಾ ಮತ್ತು ರೀಮಾ
ಕೈ ಚಾಚಿ ನಿರ್ಮಿಸಿಕೊಳ್ಳುವರು ಸೇತುವೆ
ಶಬ್ದ ಶಬ್ದ ಶಬ್ದ ಇವರ ಕಬ್ಬಿಣ
ಉಸಿರುಸಿರು ಇವರ ಹಗ್ಗ

ಮಾತೆಂದರೆ ಎಂಥ ಮಾತು
ಒಂದಾದರೂ ಪದ ಈ ಕೋಣೆಯದಲ್ಲ
ಉಚ್ಚೆಯ ವಾಸನೆಯದಲ್ಲ ಮುದುರಿ ಬಿದ್ದ
ಬಳಸಿದ ಕಾಂಡೋಮಿನದಲ್ಲ
ಮೈ ಮೇಲಿನ ಗಾಯಗಳದಲ್ಲ
ಒಳ ಪದರದ ನೋವಿನದಲ್ಲ
ಅಲ್ಲ ಅಲ್ಲ ಅಲ್ಲ

ಮಾತು ಮಾತು ಮಾತು
ನಗು ನಗು ನಗು
ಗಾಳಿಯ ಮಾಯಕದಲ್ಲೇ ಚಲಿಸುವ ಹಾಗೆ
ಹೂವಿನ ಗಂಧ
ದಾಟುತ್ತಿದ್ದಾರೆ ಸುಮಾ ಮತ್ತು ರೀಮಾ
ಮಾತೆಂಬ ಈ ನೂಲು
ಹರಿಯದ ಹಾಗೆ.

